8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಧಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರ ವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ॥ ಪೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸುಳ್ಳು ಲಿತ್ಯಗಳಿಗೆ ಗವರ್ಣ ಮೆಂಟಿನವರು ಜವಾಬ್ದಾರ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಣಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಡಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪಸೀಲ್. ಕಟ್ಟಡಗಳು. ಕಬ್ಜಾದಾರರ ಹೆಸರು.	ಅಂದಾಜು ಕಿಮ್ಮತ್ತು ರೂ.	ಜಮೀನು. ನಂಬರ್ ಆಫ್ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು, ಅಥವಾ ಬಾಗಾಯಿತು ಅಲ್ಲದ್ದು.	ವಿಸ್ತೀರ್ಣ.	ಟಕ್ಕಾರು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಕೃಷ್ಣರಾಜಪೇಟೆ	ಹಳೆಹೆಬ್ಬಳ್ಳಿ	ಸರ್ವನಾಯ್ಕನಹಳ್ಳಿ	ಕಾಣಂದೂರ್ ಕೃಷ್ಣಪ್ಪನಾಯ್ಕರ್ ಮತ್ತು ದಾಸಾಚಾರ್ಯರು.	ಗ್ರಾಮ ಪೂರ್ತ.		ಖುಷ್ಕಿ, ತರಿ, ಬಾಗಾಯಿತು, ಪರಾಬ್ ಸಹ.	ಎ. ಗು. 688 17	ರೂ. ಆ. ಪೈ. 849 8 0.	ರೂ. ಆ. 7,390 11 — ಇನ್ ಕಂಟ್ರಿ ಬ್ಯೂರ್ಷ. 1 8 ಖರ್ಚು. 1,392 3

ಜವುತರ್ಫ್.
ಪೂರ್ವಕ್ಕೆ —ಎಡಹಳ್ಳಿ ಮತ್ತು ಬೆಳ್ಳಿಬಟ್ಟದ ಕಾವಲು ಗಡಿ.
ಪಶ್ಚಿಮಕ್ಕೆ —ಕುರ್ನೇನಹಳ್ಳಿ ಗಡಿ.
ದಕ್ಷಿಣಕ್ಕೆ —ಮುದವನಕೂಡಿ ಮತ್ತು ಬೆಳ್ಳಿಬಟ್ಟದಕಾವಲ್ ಗಡಿ
ಉತ್ತರಕ್ಕೆ —ಹೆರಣೇನಹಳ್ಳಿ ಗಡಿ.

ಸರ್ಕಾರಕ್ಕೆ ಸಾಲಿಯಾನಾ ಬರತಕ್ಕ ಲೋ॥ ಸೆಸ್ಸು 54—1—10 ಇದು ವಸೂಲು ಬಂದುಯಿದೆ ಬಾಕಿಯಿಲ್ಲ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಹರಾಜಿನ ಡಿಸ್ಟ್ರಿಕ್ಟ್.
ಇಸ್ತಿಹಾರ್ನಾಮೆ.

ತಾರೀಖು 25ನೇ ಜನವರಿ 1907ನೆ ಇಸವಿ.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರು ನಾರಣಾಚಾರ್ಯರು ವಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚಿ ತಪಸೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮರ್ತ್ಯಂ ಮೈಸೂರು ಗೆಜೆಟ್ಟಿನ 11ನೆ ಭಾಗದ 30—31ನೆ ಪುಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.
ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಮರ್ತ್ಯಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —